# ಪ್ರಭಾಸ್ ಚಿತ್ರಗಳ ಬಜೆಟ್ ಭಾರ

■ ವಿಶಾಖ ಎನ್.



‘ಆದಿಪುರುಷ್’ ಸಿನಿಮಾ ಟೀಸರ್ ಈಚೆಗೆ ಬಿಡುಗಡೆಯಾಯಿತು. ಅದರಲ್ಲಿನ ರಾವಣ ಪಾತ್ರಧಾರಿ ಸೈಫ್ ಅಲಿ ಖಾನ್ ಕೇಶವಿನ್ಯಾಸ, ಮೇಕಪ್ ಎಲ್ಲವನ್ನೂ ಕಂಡು, ‘ಇವನೆಂಥಾ ರಾವಣ’ ಎಂದು ಕೆಲವರು ಮಾತಿನ ಕತ್ತಿ ಬೀಸತೊಡಗಿದರೆ, ಇನ್ನು ಕೆಲವರು, ‘ಇವನು ಮುಸಲ್ಮಾನ ರಾವಣ ಇದ್ದಹಾಗಿದೆ’ ಎಂದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕಮೆಂಟಿಸಿದ್ದಾರೆ. ‘ಯಾವುದೋ ಕಾರ್ಟೂನ್ ಕಾರ್ಯಕ್ರಮ ಇದ್ದಂತಿದೆ’ ಎನ್ನುವುದು ವ್ಯಕ್ತವಾದ ಮತ್ತೊಂದು ಟೀಕೆ. ‘ಛೋಟಾ ಭೀಮ್ ತರಹ ಇದೂ ಒಂದು’ ಎಂದವರೂ ಇದ್ದಾರೆ.

ಓಂ ರಾವುತ್ ನಿರ್ದೇಶನದ ‘ಆದಿಪುರುಷ್’ ರಾಮಾಯಣದ ಕಥೆಯನ್ನು ಮರುನಿರೂಪಿಸುವ ಯತ್ನ. ಆ ನಿರೂಪಣೆಯಲ್ಲಿ ಹೊಸತೇನು ಇರುತ್ತದೆ ಎನ್ನುವ ಕುತೂಹಲವಿತ್ತು. ಪ್ರಭಾಸ್ ರಾಮನ ಪಾತ್ರಧಾರಿ ಆಗಿರುವುದರಿಂದ ನಿರೀಕ್ಷೆಯ ಭಾರವೂ ನಿರ್ದೇಶಕರ ಮೇಲಿತ್ತು. ಮೊದಲ ಟೀಸರ್‌ಗೆ ಬಂದಿರುವ ಪ್ರತಿಕ್ರಿಯೆಗಳನ್ನು ಕಂಡು ಅವರು ದಂಗಾಗಿರುವುದಂತೂ ನಿಜ. ಮತ್ತೆ ಕೆಲವರು, ಇದು ಕೂಡ ಮಾರುಕಟ್ಟೆ ತಂತ್ರವೆ ಎಂದೂ ವಿಶ್ಲೇಷಿಸುತ್ತಿದ್ದಾರೆ.

ತೆಲುಗು ನಟ ಪ್ರಭಾಸ್ ಅವರನ್ನು ಹಾಕಿಕೊಂಡು ಯಾರೇ ಸಿನಿಮಾ ಮಾಡತೊಡಗಿದರೂ ಇಂತಹ ಒತ್ತಡ–ಭಾರ ಈಗ ಸಹಜವೆ. ‘ಬಾಹುಬಲಿ’ ಮೊದಲ ಭಾಗದ ಸಿನಿಮಾ ತಯಾರಾದದ್ದು ₹180 ಕೋಟಿ ಬಜೆಟ್‌ನಲ್ಲಿ. ಅದರ ಗೆಲುವು ಎರಡನೇ



ಭಾಗದ ಬಜೆಟ್ಟನ್ನು ₹250 ಕೋಟಿಗೆ ವಿಸ್ತರಿಸಿತು. ‘ಸಾಹೊ’ ಕೂಡ ₹300 ಕೋಟಿಗೂ ಹೆಚ್ಚಿನ ಬಜೆಟ್‌ನಲ್ಲಿ ತಯಾರಾಯಿತು. ಅದು ನಿರೀಕ್ಷಿತ ಯಶಸ್ಸು ಕಾಣಲಿಲ್ಲವಾದರೂ ₹200 ಕೋಟಿಗೂ ಹೆಚ್ಚು ಲಾಭವನ್ನು ಪ್ರಭಾಸ್ ನೆಚ್ಚಿಕೊಂಡಿದ್ದ ಮಾರುಕಟ್ಟೆಯಿಂದಾಗಿ ತಂದೊಡ್ಡಿತ್ತು. ಕೋವಿಡ್ ನಂತರ ಮಾರುಕಟ್ಟೆಯ ಲೆಕ್ಕಾಚಾರಗಳು ಬದಲಾಗುತ್ತಿವೆ. ತಮ್ಮನ್ನು ಆ್ಯಕ್ಷನ್ ಕೇಂದ್ರಿತ ಪಾತ್ರಗಳಿಂದ ಹೊರತರಬೇಕೆಂಬ ಪ್ರಯತ್ನವಾಗಿ ಪ್ರಭಾಸ್ ‘ರಾಧೆ ಶ್ಯಾಮ್’ ರೊಮ್ಯಾಂಟಿಕ್ ಸಿನಿಮಾ ಒಪ್ಪಿಕೊಂಡರು. ಅದು ಕೂಡ ₹300 ಕೋಟಿಗೂ ಹೆಚ್ಚು ಬಜೆಟ್‌ನಲ್ಲೇ ತಯಾರಾದದ್ದು. ಆದರೆ, ಅದರಿಂದ ನಿರ್ಮಾಪಕರಿಗೆ ₹80 ಕೋಟಿಗೂ ಅಧಿಕ ನಷ್ಟವಾಯಿತು.

‘ಆದಿಪುರುಷ್’ ಚಿತ್ರಕಥೆಯನ್ನು ತಾವು ಸಿದ್ಧಪಡಿಸಿದ್ದೇ ಪ್ರಭಾಸ್ ಅವರನ್ನು ರಾಮನನ್ನಾಗಿ ಮನಸ್ಸಿನಲ್ಲಿ ಇಟ್ಟುಕೊಂಡು ಎಂದು ಓಂ ರಾವುತ್ ಹಿಂದೊಮ್ಮೆ ಹೇಳಿದ್ದರು. ಈಗ ಚಲನಚಿತ್ರದ ಟೀಸರ್‌ಗೆ ಇಷ್ಟೊಂದು ನಕಾರಾತ್ಮಕ ಪ್ರತಿಕ್ರಿಯೆ ಬರುತ್ತಿರುವುದು ಅವರನ್ನು ಕಂಗಾಲಾಗಿಸಿರಬಹುದೆ ಎಂಬ ಅನುಮಾನವೂ ಇದೆ. ಒಂದು ವೇಳೆ ಹಾಗೆ ಆಗಿದ್ದಲ್ಲಿ, ಅದನ್ನು ಸಿನಿಮಾದಲ್ಲಿ ಅವರು ಹೇಗೆ ಸರಿಪಡಿಸಬಹುದೆನ್ನುವುದು ಜಿಜ್ಞಾಸೆ.

ಪ್ರಭಾಸ್ ಮಾರುಕಟ್ಟೆ ಮೌಲ್ಯ ಈಗಲೂ ಕಡಿಮೆಯಾಗಿಲ್ಲ. ಪ್ರಶಾಂತ್ ನೀಲ್ ನಿರ್ದೇಶಿಸುತ್ತಿರುವ ‘ಸಲಾರ್’ ಚಿತ್ರದ ಬಜೆಟ್ ₹300 ಕೋಟಿಗೂ ಹೆಚ್ಚು. ‘ಮಹಾನಟಿ’ ತೆಲುಗು ಸಿನಿಮಾ ನಿರ್ದೇಶಿಸಿದ್ದ ನಾಗ್ ಅಶ್ವಿನ್ ‘ಪ್ರಾಜೆಕ್ಟ್ ಕೆ’ ಎಂಬ ಸೈ–ಫೈ ಸಿನಿಮಾವನ್ನು ಪ್ರಭಾಸ್‌ಗಾಗಿ ಸಿದ್ಧಪಡಿಸಲು ಹೊರಟಿದ್ದಾರೆ. ಅದರ ಬಜೆಟ್ ಕೂಡ ₹300 ಕೋಟಿಗೆ ಮೀರಿದ್ದು.

ಚಿತ್ರಕಥೆ ತಮಗೆ ಇಷ್ಟವಾಗುವ ಸ್ಕ್ರಿಪ್ಟ್‌ಗಳನ್ನು ಬಜೆಟ್ ಬಗೆಗೆ ಯೋಚಿಸದೆಯೂ ಪ್ರಭಾಸ್ ಒಪ್ಪಿಕೊಳ್ಳುತ್ತಾರೆ ಎನ್ನುವುದಕ್ಕೂ ಒಂದು ಉದಾಹರಣೆ ಇದೆ. ಮಾರುತಿ ಎನ್ನುವ ನಿರ್ದೇಶಕ ‘ರಾಜಾ ಡೀಲಕ್ಸ್’ ಎಂಬ ಸಿನಿಮಾ ಮಾಡಲಿದ್ದು, ಅದರ ನಾಯಕ ಪ್ರಭಾಸ್. ಅದರ ಬಜೆಟ್ ₹100 ಕೋಟಿ ಎನ್ನಲಾಗುತ್ತಿದೆ.

‘ಸಲಾರ್’ ಸಿನಿಮಾದ ಫಲಿತದ ಮೇಲೆ ಪ್ರಭಾಸ್ ವೃತ್ತಿಬದುಕಿನ ಮುಂದಿನ ಗ್ರಾಫ್ ನಿಂತಿದೆ ಎನ್ನುವ ಮಾರುಕಟ್ಟೆ ವಿಶ್ಲೇಷಕರ ಅಭಿಪ್ರಾಯ ಬಹುತೇಕರು ಒಪ್ಪುವಂಥದ್ದು. ■